ದೂರವಾಣಿ ಸಂಖ್ಯೆ: 080–22212343
ಫ್ಯಾಕ್ಸ್ ಸಂಖ್ಯೆ: 080–22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number (CIN): U40109KA1999SGC025521**

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009)**

**ಓದಲಾಗಿದೆ:–**

1. ಕವಿಪ್ರನಿನಿ ನೌಕರರ ಸೇವಾ ನಿಯಮಗಳ ನಿಬಂಧನೆ 182 (ಎ).
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005–06 ದಿನಾಂಕ: 01.12.2008.
3. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/20315/2015–16 ದಿನಾಂಕ: 08.03.2017.
4. ದಿನಾಂಕ: 24.06.2021 ರಂದು ನಡೆದ ನಿಗಮದ ನಿರ್ದೇಶಕರುಗಳ 125ನೇ ಮಂಡಳಿ ಸಭೆಯ ಠರಾವು ಸಂಖ್ಯೆ: 125/28.

**ಪೀಠಿಕೆ:**

ನಿಗಮದಲ್ಲಿ ಸೇವೆಗೆ ಸೇರುವ ಮುನ್ನ, ಸರ್ಕಾರಿ ಸೇವೆ, ಸ್ಥಳೀಯ ಸಂಸ್ಥೆ, ಜಿಲ್ಲಾ ಬೋರ್ಡ್, ನಗರ ಸಭೆ, ಮೈಸೂರು ಮತ್ತು ಹೈದರಾಬಾದ್ ರಾಜ್ಯ, ರೈಲ್ವೆ, ಕೇಂದ್ರ ಮತ್ತು ರಾಜ್ಯ ವಾಣಿಜ್ಯ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳು ಅಥವಾ ಕೇಂದ್ರ ಸರ್ಕಾರಗಳು ಸ್ಥಾಪಿಸಿದ ಸಂಸ್ಥೆಗಳು, ಇತ್ಯಾದಿಗಳಲ್ಲಿ ಸಲ್ಲಿಸಿರುವ ಸೇವೆಯನ್ನು, ಕೆಲವು ಷರತ್ತುಗಳಿಗೊಳಪಟ್ಟು, ನಿಗಮದಲ್ಲಿ ಪಿಂಚಣಿ ಸೌಲಭ್ಯಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು, ಕವಿಪ್ರನಿನಿ ನೌಕರರ ಸೇವಾ ನಿಯಮಗಳ ಕಂಡಿಕೆ 182 (ಎ) ರಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005–06 ದಿನಾಂಕ: 05.07.2007 ರಲ್ಲಿ ದಿನಾಂಕ: 01.04.2006 ರ ನಂತರ ನಿಗಮದ ಸೇವೆಗೆ ಸೇರುವ ಎಲ್ಲಾ ನೌಕರರು ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಯಡಿ ಪರಿಗಣಿಸಲು ಆದೇಶ ಹೊರಡಿಸಲಾಗಿರುತ್ತದೆ. ದಿನಾಂಕ: 01.04.2006 ಕ್ಕಿಂತ ಹಿಂದೆ ಸರ್ಕಾರದ ಸಂಸ್ಥೆಗಳಲ್ಲಿ ಸೇವೆಯಲ್ಲಿದ್ದು, ದಿನಾಂಕ: 01.04.2006 ರ ನಂತರ ನಿಗಮ/ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ಯಾವುದೇ ಹುದ್ದೆಗೆ ನೇಮಕಾತಿಗೊಂಡು ಕರ್ತವ್ಯಕ್ಕೆ ಹಾಜರಾಗಿದ್ದರೆ, ಅಂತಹ ನೌಕರರು ಸರ್ಕಾರದಲ್ಲಿ ಸಲ್ಲಿಸಿರುವ ಸೇವಾವಧಿಯಲ್ಲಿ ಪಡೆದಿರುವ ಒಟ್ಟು ವೇತನದ ಮೊತ್ತದಲ್ಲಿ 1/8ನೇ ಭಾಗವನ್ನು ಶೇಕಡ 3 ರ ಬಡ್ಡಿ ಸಮೇತ ನಿಗಮ/ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡಿದ್ದಲ್ಲಿ, ಅಂತಹ ನೌಕರರನ್ನು ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಯಿಂದ ವಿನಾಯಿತಿ ನೀಡಿ, ಕವಿಮಂ ನೌಕರರ ಸೇವಾ ನಿಬಂಧನೆ 182 (ಎ) ರ ಪ್ರಕಾರ ಲಭ್ಯವಿರುವ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಬಹುದೆಂದು, ನಿಗಮದ ದಿನಾಂಕ: 01.12.2008 ರ ಸುತ್ತೋಲೆಯಲ್ಲಿ ಸ್ಪಷ್ಟೀಕರಿಸಲಾಗಿದೆ.

ಕವಿಪ್ರನಿನಿ ನೌಕರರ ಸೇವಾ ನಿಯಮಗಳ ನಿಯಮ 182 (ಎ) ಅನ್ನು ರದ್ದುಪಡಿಸುವ ವಿಷಯವನ್ನು ದಿನಾಂಕ: 24.06.2021 ರಂದು ನಡೆದ ಕವಿಪ್ರನಿನಿ ನಿರ್ದೇಶಕರುಗಳ ಮಂಡಳಿಯ 125ನೇ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಮಂಡಳಿಯು, ಈ ಕೆಳಗಿನ ಅಂಶಗಳನ್ನು ಪರಿಗಣಿಸಿರುತ್ತದೆ.

- ನಿಗಮದ ಸೇವೆಗೆ ಸೇರುವ ಪೂರ್ವದಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಲೆಕ್ಕಿಸುವ ಪದ್ಧತಿಯು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಅಸ್ತಿತ್ವದಲ್ಲಿರುವುದಿಲ್ಲ.

- ಈ ಸೌಲಭ್ಯವನ್ನು ವಿಸ್ತರಿಸುವುದರಿಂದ, ರಾಜ್ಯ ಸರ್ಕಾರಕ್ಕೆ ಮತ್ತು ನಿಗಮ/ಎಸ್ಕಾಂಗಳಿಗೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ.
- ಕವಿಪ್ರನಿನಿ ನೌಕರರ ಸೇವಾ ನಿಬಂಧನೆ 182 (ಎ) ರ ಅನ್ವಯ ಲೆಕ್ಕೀಕರಿಸಿ, ನೌಕರರಿಂದ ನಿಗಮಕ್ಕೆ ಜಮೆಗೊಳ್ಳುವ 1/8 ನೇ ಭಾಗದ ವಂತಿಗೆ ಮತ್ತು ಇವರಿಗೆ ನಿವೃತ್ತಿ ಸಮಯದಲ್ಲಿ ಟ್ರಸ್ಟ್ ನಿಂದ ಪಾವತಿಸುವ ನಿವೃತ್ತಿ ಉಪಲಬ್ಧಗಳ ಮೊತ್ತಕ್ಕೆ ಹೆಚ್ಚಿನ ಅಂತರ ಉಂಟಾಗಿ, ಈ ಹೆಚ್ಚುವರಿ ಆರ್ಥಿಕ ಹೊರೆಯನ್ನು ಪಿಂಚಣಿ ಮತ್ತು ಉಪದಾನ ಟ್ರಸ್ಟ್ ರವರ ಕಚೇರಿಯಿಂದ ಭರಿಸಬೇಕಿರುತ್ತದೆ.
- ಕವಿಪ್ರನಿನಿ/ಎಸ್ಕಾಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ನಿಧಿಗಾಗಿ ಸರ್ಕಾರವನ್ನು ಅವಲಂಬಿಸುವಂತಿಲ್ಲ ಎಂದು ಕರ್ನಾಟಕ ಸರ್ಕಾರವು ಆಗಿಂದಾಗ್ಗೆ ತಿಳಿಸಿರುತ್ತದೆ ಮತ್ತು ಹಿಂದಿನ ಯಾವುದೇ ಬಾಕಿಗಳಿಗೆ ಸರ್ಕಾರವು ಹೊಣೆಯಾಗಿರುವುದಿಲ್ಲ ಎಂದು ತಿಳಿಸಿರುತ್ತದೆ.
- ಈ ಸೌಲಭ್ಯವನ್ನು ವಿಸ್ತರಿಸಲು ನೌಕರರಿಂದ ಪಡೆಯಲಾಗುವ ಮಂತಿಗೆ ಮತ್ತು ಬಡ್ಡಿ ಮೊತ್ತವು, ಇವರುಗಳು ನಿವೃತ್ತಿ ಸಮಯದಲ್ಲಿ ಪಡೆಯುವ ಉಪಲಬ್ಧಗಳಿಗೆ ಅನುಗುಣವಾಗಿರುವುದಿಲ್ಲ. ಆದ್ದರಿಂದ, ಈ ಸೌಲಭ್ಯವು ಸಮರ್ಥನೀಯವಾಗಿ ಮುಂದುವರಿಸಲು ಮುಂಬರುವ ದಿನಗಳಲ್ಲಿ ಕಾರ್ಯಸಾಧ್ಯವಾಗಿರುವುದಿಲ್ಲ.

ದಿನಾಂಕ: 24.06.2021 ರಂದು ನಡೆದ ನಿಗಮದ ನಿರ್ದೇಶಕರುಗಳ ಮಂಡಳಿಯ 125ನೇ ಸಭೆಯ ನಿರ್ಣಯದಂತೆ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/20315/2015-16, ಬೆಂಗಳೂರು ದಿನಾಂಕ:** 11 OCT 2021

ನಿಗಮದ ಸೇವೆಗೆ ಸೇರುವ ಮುನ್ನ, ಸರ್ಕಾರಿ ಸೇವೆ, ಸ್ಥಳೀಯ ಸಂಸ್ಥೆ, ಜಿಲ್ಲಾ ಬೋರ್ಡ್, ನಗರ ಸಭೆ, ಮೈಸೂರು ಮತ್ತು ಹೈದರಾಬಾದ್ ರಾಜ್ಯ, ರೈಲ್ವೆ, ಕೇಂದ್ರ ಮತ್ತು ರಾಜ್ಯ ವಾಣಿಜ್ಯ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳು, ಅಥವಾ ಕೇಂದ್ರ ಸರ್ಕಾರ ಸ್ಥಾಪಿಸಿದ ಸಂಸ್ಥೆಗಳು, ಇತ್ಯಾದಿಗಳಲ್ಲಿ ಸಲ್ಲಿಸಿರುವ ಸೇವೆಯನ್ನು, ಕೆಲವು ಷರತ್ತುಗಳಿಗೊಳಪಟ್ಟು, ನಿಗಮದಲ್ಲಿ ಪಿಂಚಣಿ ಸೌಲಭ್ಯಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವ ವಿಷಯದಲ್ಲಿ, ಈ ಕೆಳಕಂಡಂತೆ ಆದೇಶಿಸಲಾಗಿದೆ:-

1. ಕವಿಪ್ರನಿನಿ ನೌಕರರ ಸೇವಾ ನಿಯಮಗಳ ನಿಬಂಧನೆ 182 (ಎ), ಸುತ್ತೋಲೆ ಸಂಖ್ಯೆ ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 01.12.2008 ಹಾಗೂ ತತ್ಸಂಬಂಧ ಹೊರಡಿಸಿರುವ ಎಲ್ಲಾ ಆದೇಶ/ಮಾಗಸೂಚಿಗಳನ್ನು ದಿನಾಂಕ 24.06.2021 ರಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ.

2. ಕವಿಪ್ರನಿನಿ ನೌಕರರ ಸೇವಾ ನಿಯಮಗಳ ನಿಬಂಧನೆ 182 (ಎ) ರ ಅಡಿಯಲ್ಲಿ ಹಿಂದಿನ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸುವಂತೆ ಸಲ್ಲಿಸಿರುವ ಎಲ್ಲಾ ಬಾಕಿಯಿರುವ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗಿದೆ.

ಆದೇಶದ ಮೇರೆಗೆ,

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

<u>ಗೆ:</u>

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.

5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.